ದಿನಾಂಕ: 14-02-2017

**ಪ್ರತಿಕಾ ಪ್ರಕಟಣೆಗಾಗಿ**

# ಗ್ರಾಮ ಸಭೆಯ ಹಕ್ಕನ್ನು ಮೊಟಕುಗೊಳಿಸಿದ ಸರಕಾರಿ ಆದೇಶಕ್ಕೆ ಹೈಕೋರ್ಟ್ ತಡೆ

ವಸತಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಗ್ರಾಮ ಸಭೆಯ ಸಂವಿಧಾನಾತ್ಮಕ ಹಕ್ಕನ್ನು ಮೊಟಕುಗೊಳಿಸಿ ಈ ಹಕ್ಕನ್ನು ಶಾಸಕರ ಜಾಗೃತ ಸಮಿತಿಗೆ ನೀಡುವ ಬಗ್ಗೆ 2015ರಲ್ಲಿ ವಸತಿ ಇಲಾಖೆ ಸುತ್ತೋಲೆಯನ್ನು ಹೊರಡಸಿತ್ತು. ಸಂವಿಧಾನದತ್ತವಾದ ಗ್ರಾಮ ಸಭೆಯ ಈ ಹಕ್ಕನ್ನು ಕಿತ್ತುಕೊಳ್ಳಬಾರದೆಂದು ಉಚ್ಛ ನ್ಯಾಯಾಲಯದಲ್ಲಿ ಶ್ರೀಮತಿ ನಂದನಾ ರೆಡ್ಡಿ ಹಾಗೂ ಶ್ರೀ ದಾಮೋದರ ಆಚಾರ್ಯ ಇವರು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಪರವಾಗಿ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯು (ರಿಟ್ ಅರ್ಜಿ ಸಂಖ್ಯೆ: WP 6015/2017) ಇಂದು ಅಂಗೀಕಾರಗೊಂಡು, ಅದನ್ನು ಹೈಕೋರ್ಟ್ ಆಲಿಸಿತು. ಅರ್ಜಿದಾರರ ಪರವಕೀಲರಾಗಿ ಶ್ರೀ ರವಿವರ್ಮಕುಮಾರ್‌ರವರು ವಿಷಯ ಮಂಡಿಸಿದರು. ಮಾನ್ಯ ಉಚ್ಚ ನ್ಯಾಯಾಲಯವು ಇಂದು ಜಾಗ್ರತ ಸಮಿತಿ ರಚನೆಗೆ ಸಂಬಂಧಿಸಿದ ಆದೇಶ ಸಂಖ್ಯೆ ವಇ 67 ಹೆಚ್‌ಎಹೆಚ್ 2015, ದಿನಾಂಕ 26-11-2015ರ ಈ ಸುತ್ತೋಲೆಗೆ ತಡೆಯನ್ನು ನೀಡಿತು. ಈ ಮೂಲಕ ಗ್ರಾಮ ಸಭೆಯ ಸಾಂವಿಧಾನಿಕ ಹಕ್ಕನ್ನು ಎತ್ತಿಹಿಡಿಯಿತು.

ಸಂವಿಧಾನಾತ್ಮಕವಾಗಿ ಹಾಗೂ ಗ್ರಾಮ ಸ್ವರಾಜ್ ಕಾಯಿದೆಯ ಪ್ರಕಾರ ಯಾವುದೇ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ಹಕ್ಕು ಮತ್ತು ಅಧಿಕಾರ ಗ್ರಾಮ ಸಭೆಯದ್ದು. ಆದರೆ ಸರ್ಕಾರದಿಂದ ಆಗಾಗ ಹೊರಡಿಸುವ ಕೆಲವು ಸುತ್ತೋಲೆಗಳು ಗ್ರಾಮ ಸಭೆಯನ್ನು ದುರ್ಬಲಗೊಳಿಸುವ ಹಾಗೂ ಸಂವಿಧಾನದತ್ತ ಹಕ್ಕನ್ನು ಮೊಟಕುಗೊಳಿಸುವ ಅಂಶಗಳನ್ನು ಒಳಗೊಂಡಿರುತ್ತವೆ. ಅಂತಹ ಸುತ್ತೋಲೆಗಳಲ್ಲಿ ವಸತಿ ಇಲಾಖೆಯಿಂದ ಹೊರಡಿಸಿದ ಸುತ್ತೋಲೆಯೂ ಪ್ರಮುಖವಾಗಿದೆ. ವಸತಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಗ್ರಾಮ ಸಭೆಯ ಹಕ್ಕನ್ನು ಕಿತ್ತು ಶಾಸಕರ ಜಾಗೃತ ಸಮಿತಿಗೆ ನೀಡುವುದರ ಮೂಲಕ ಗ್ರಾಮ ಸ್ವರಾಜ್ ಕಾಯ್ದೆಯನ್ನು ಉಲ್ಲಂಘಿಸುಸುವುದರ ಜೊತೆಗೆ ಗ್ರಾಮ ಸಭೆಯ ಹಕ್ಕಿಗೂ ಚ್ಯುತಿ ತಂದಿತ್ತು. ಇದರ ವಿರುದ್ಧ ರಿಟ್ ಅರ್ಜಿಯನ್ನು ಸಲ್ಲಿಸಲಾಗಿತ್ತು.

2007ರಲ್ಲಿಯೂ ಸರಕಾರವು ವಸತಿ ಮುಂತಾದ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆಯ ಅಧಿಕಾರವನ್ನು ಗ್ರಾಮ ಪಂಚಾಯತ್ ಗಳಿಂದ ಕಸಿದು ಶಾಸಕರ ನೇತೃತ್ವದ ಸಮಿತಿಗೆ ವರ್ಗಾಯಿಸುವಲ್ಲಿ ಕೆಲಮನೆ ಮತ್ತು ಮೇಲ್ಮನೆಗಳಲ್ಲಿ ತಿರ್ಮಾನ ತೆಗೆದುಕೊಂಡದ್ದೂ, ಅದರ ವಿರುದ್ಧ ಗ್ರಾಮ ಪಂಚಾಯತ್ ಹಕ್ಕೋತ್ತಾಯ ಆಂದೋಲನ ರಾಜ್ಯಾದ್ಯಂತ ಪ್ರತಿಭಟನೆ ಸಂಚಲನಗೊಳಿಸಿದ್ದು, ಪರಿಣಾಮವಾಗಿ ಮಾನ್ಯ ರಾಜ್ಯಪಾಲರು ಆ ತಿದ್ದುಪಡಿಗೆ ತಮ್ಮ ಸಮ್ಮತಿ ನೀಡದೆ ಅದನ್ನು ಹಿಂತಿರುಗಿಸುವ ಮೂಲಕ ಅದನ್ನು ತಡೆ ಹಿಡಿದದ್ದು ಉಲ್ಲೇಖನಾರ್ಯ. ಹೀಗೆ ಅನೇಕ ಬಾರಿ ತಮ್ಮ ಸ್ವಂತ ಹಿತಾಸಕ್ತಿಗಾಗಿ ಶಾಸಕರು ಒತ್ತಾಯ ಹೇರುವುದರ ಮೂಲಕ ಗ್ರಾಮ ಸಭೆಯ ಹಕ್ಕುಗಳಿಗೆ ದಕ್ಕೆ ಬರುವಂತಹ ಆದೇಶಗಳು ಚಾಲ್ತಿಯಲ್ಲಿವೆ.

ಗ್ರಾಮ ಸ್ವರಾಜ್ಯದ ಕಲ್ಪನೆಗೆ, ಅದರ ಉದ್ದೇಶಗಳಿಗೆ ವಿರುದ್ಧವಾಗಿರುವ, ಕಾನೂನನ್ನು ಅಕ್ಷರಶಃ ಉಲ್ಲಂಘಿಸುವ ಇಂತಹ ಎಲ್ಲಾ ನಡೆಗಳನ್ನು ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ತೀವ್ರವಾಗಿ ಖಂಡಿಸುತ್ತದೆ. ಅಲ್ಲದೇ, ಗಾಂಧೀಜಿಯ ಕನಸಿನ ಗ್ರಾಮ ಸ್ವರಾಜ್ಯದ ಆಶಯದ ತಳಹದಿಯ ಮೇಲೆ ರೂಪಿತವಾದ ಹೊಸ **"ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ – 1993"** ರ ಸಂಪೂರ್ಣ ಪರಿಣಾಮಕಾರೀ ಅನುಷ್ಟಾನದ ಕಾರ್ಯಗತಗೊಳಸುವಿಕೆಗೆ ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನ ಸದಾ ಕಟಬದ್ಧವಾಗಿರುತ್ತದೆ.

ಈ ನಿಟ್ಟನಲ್ಲಿ ವಸತಿ ಇಲಾಖೆಯ ಸುತ್ತೋಲೆಗೆ ಉಚ್ಛ ನ್ಯಾಯಾಲಯ ನೀಡಿದ ತಾತ್ಕಾಲಿಕ ತಡೆಯು ಅದನ್ನು ರದ್ದುಗೊಳಸುವಲ್ಲ ಮೊದಲ ಹೆಜ್ಜೆಯಾಗಲಿ. ಗ್ರಾಮ ಸಭೆಯ ಅಧಿಕಾರವನ್ನು ಯಾವುದೇ ಕಾರಣಕ್ಕೂ ಯಾವುದೇ ಆದೇಶ ಅಥವಾ ಸುತ್ತೋಲೆಗಳನ್ನು ಪರಿಗಣಿಸಿ ಈ

***ಸ್ಫೂರ್ತಿದಾತರು:***

**ಶ್ರೀ ಎಲ್.ಸಿ.ಜೈನ್,**
ಮಾಜಿ ಸದಸ್ಯರು, ರಾಷ್ಟ್ರೀ0ಯ 0ಯೋಜನಾ ಆ0ಯೋಗ ಮತ್ತು ದಕ್ಷಿಣ ಆಫ್ರಿಕಾದ ಮಾಜಿ ಭಾರತೀ0ಯ ರಾ0ಯಭಾರಿಗಳು

**ಶ್ರೀ ಮನು ಕುಲಕರ್ಣಿ,** ಗೌರವಾನ್ವಿತ ಹಿರಿಯ ಫೆಲೋ, ಸಾಮಾಜಿಕ ವಿಜ್ಞಾನಗಳ ಸಂಸ್ಥೆ, ಬೆಂಗಳೂರು

***ಸಲಹಾ ಸಮಿತಿ ಸದಸ್ಯರು:***

**ಡಾ. ವಿನೋದ್ ವ್ಯಾಸುಲು,**
ವಿಕೇಂದ್ರೀಕರಣ ಚಿಂತಕರು

**ಶ್ರೀ ಚಿರಂಜೀವ್ ಸಿಂಗ್** ಬೆಂಗಳೂರು, ಮಾಜಿ ಅಭಿವೃದ್ಧಿ ಆ0ಯುಕ್ತರು, ಕರ್ನಾಟಕ ಸರಕಾರ

**ಶ್ರೀ ಮೀನಾಕ್ಷಿ ಸುಂದರಂ,** ಮಾಜಿ ಕಾ0ರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮಂತ್ರಾಲ0ಯ, ಭಾರತ ಸರಕಾರ

**ಶ್ರೀ ರಘುನಂದನ್ ರಾಘವನ್,**
ಮಾಜಿ ಜಂಟಿ ಕಾರ್ಯದರ್ಶಿ, ಪಂಚಾಯತ್ ರಾಜ್ ಮಂತ್ರಾಲಯ ಭಾರತ ಸರ್ಕಾರ, ಪ್ರಧಾನ ಕಾರ್ಯದರ್ಶಿ ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ

**ಶ್ರೀ. ಮಹಿಮಾ ಪಟೇಲ್**
ಟ್ರಸ್ಟೀ, ಜೆ.ಹೆಚ್. ಪಟೇಲ್ ಫೌಂಡೇಶನ್

**ಶ್ರೀ ಮೈಕೆಲ್ ಫೆರ್ನಾಡಿಸ್**
ಕಾರ್ಮಿಕ ಮುಖಂಡರು

**ಶ್ರೀ ವಿನಯ್ ಬೈಂದೂರು**
ಸಂಶೋಧಕರು, ವಿಕೇಂದ್ರಿಕರಣ

**ಶ್ರೀಮತಿ ನಂದನಾ ರೆಡ್ಡಿ**
ಸಂಚಾಲಕರು

***ಸಂಯೋಜನಾ ಸಮಿತಿ:***

**ಗ್ರಾಮ ಸ್ವರಾಜ್ಯ ವೇದಿಕೆ**
**ಮಹಿಳಾ ಸಮಖ್ಯ ಕರ್ನಾಟಕ**
**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
**ಸುಗ್ರಾಮ**
**ಜೆ.ಹೆಚ್.ಪಟೇಲ್ ಫೌಂಡೇಶನ್**

***ಸಂಯೋಜಕರು:***

**ದಿ ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್**
303/2, ಲಾಲ್ ಬಹದ್ದೂರ್ ಶಾಸ್ತ್ರಿ ನಗರ
ವಿಮಾನಪುರ ಅಂಚೆ
ಬೆಂಗಳೂರು-560 017
ಫೋನ್: 080-25234270, 25234272, 25234611
ಇ-ಮೇಲ್: cwc@pobox.com
cwcblr@gmail.com
ವೆಬ್:
www.theconcernedforworkingchildren.org

ಅಧಿಕಾರವನ್ನು ಕಿತ್ತುಕೊಳ್ಳುವುದು ತರವಲ್ಲ. ಕಾಯ್ದೆಯನುಸಾರ ಜನರ ಅಧಿಕಾರವನ್ನು ಚಲಾಯಿಸಲು ಗ್ರಾಮ ಸಭೆಯದ್ದೇ ಅಧಿಕಾರ ಎನ್ನುವುದನ್ನು ಇದು ಸಾಬೀತು ಮಾಡಿತು. ಇನ್ನಾದರೂ ಸರ್ಕಾರ ಹಾಗೂ ಸರ್ಕಾರದ ವಿವಿಧ ಇಲಾಖೆಗಳು ವಿಕೇಂದ್ರೀಕರಣಕ್ಕೆ ಹಾಗೂ ಸಂವಿಧಾನದ ಆಶಯಗಳಿಗೆ ಧಕ್ಕೆ ತರುವ ಯಾವುದೇ ಆದೇಶ ಮತ್ತು ಸುತ್ತೋಲೆಗಳಿಗೆ ಇದು ತಡೆಯಾಗಲಿ.

ದಾಮೋದರ ಆಚಾರ್ಯ
ಗ್ರಾಮ ಪಂಚಾಯತ್ ಹಕ್ಕೊತ್ತಾಯ ಆಂದೋಲನದ ಕಾರ್ಯಾಲಯದ ಪರವಾಗಿ